ಮಾದರಿ ಪ್ರಶ್ನೆ ಪತ್ರಿಕೆ– 2022

ದ್ವಿತೀಯ ಪಿ.ಯು.ಸಿ

**[ಒಟ್ಟು ಪ್ರಶ್ನೆಗಳು: 55]** **ವಿಷಯ: ಸಂಖ್ಯಾಶಾಸ್ತ್ರ(31)**

**ಸಮಯ: 3ಗಂಟೆ 15ನಿಮಿಷ** **ಗರಿಷ್ಟ ಅಂಕಗಳು: 100**

**ಸೂಚನೆ: 1. ಸಾಂಖ್ಯಿಕ ಕೋಷ್ಟಕ ಮತ್ತು ಆಲೇಖ ಕಾಗದಗಳನ್ನು ಕೇಳಿದಾಗ ನೀಡಲಾಗುವುದು.**

**2. ವೈಜ್ಞಾನಿಕ ಕ್ಯಾಲ್ಕುಲೇಟರ್‌ಗಳನ್ನು ಬಳಸಬಹುದು.**

**3. ಕಾರ್ಯದಎಲ್ಲಾ ಹಂತಗಳನ್ನು ಸ್ಪಷ್ಟವಾಗಿತೋರಿಸಬೇಕು.**

## ವಿಭಾಗ- A

I. ಈ ಕೆಳಗಿನ ಯಾವುದಾದರೂ***ಹತ್ತು***ಪ್ರಶ್ನೆಗಳಿಗೆ ಉತ್ತರಿಸಿ: **10 × 1 = 10**

1. ಫಲಭರಿತತೆ ವ್ಯಾಖ್ಯಾನಿಸಿ.
2. ಜೀವಕೋಷ್ಟಕವನ್ನು ವ್ಯಾಖ್ಯಾನಿಸಿ.
3. ಮಾನ ಪರೀಕ್ಷೆಯನ್ನುತೃಪ್ತಿಪಡಿಸದಒಂದು ಸೂಚ್ಯಾಂಕವನ್ನು ಹೆಸರಿಸಿ.
4. ಗ್ರಾಹಕರ ಬೆಲೆ ಸೂಚ್ಯಾಂಕವನ್ನು ವ್ಯಾಖ್ಯಾನಿಸಿ.
5. ಹಿಸ್ಟೋರಿಗ್ರಾಮ್‌ಎಂದರೇನು?
6. ಕಾಲ ಸರಣಿಯಯಾವ ಏರಿಳಿತವನ್ನು ಅಂದಾಜಿಸಲು(ಅಳತೆ ಮಾಡಲು) ಸಾಧ್ಯವಿಲ್ಲ?
7. ಬರ್ನೋಲಿ ವಿತರಣೆಯ ನಿಯತಾಂಕವನ್ನು ಬರೆಯಿರಿ.
8. ಪ್ರಸಾಮಾನ್ಯ ವಕ್ರದೊಳಗಿನ ಒಟ್ಟುಕ್ಷೇತ್ರಫಲ ಎಷ್ಟು?
9. ಒಂದುಕೈವರ್ಗ ಚಲಕಕ್ಕೆ $P\left(0<\chi^2<13.33\right)=0.5$ಆದಾಗ, ಮಧ್ಯಾಂಕವನ್ನುಕಂಡುಹಿಡಿಯಿರಿ.
10. ಅಂದಾಜಿಸುವಿಕೆ ಎಂದರೇನು?
11. ಶೂನ್ಯ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿ.
12. ಭರವಸೆಯ ಮಿತಿಗಳು ಎಂದರೇನು?
13. ನಿಯಂತ್ರಣ ನಕ್ಷೆ ಎಂದರೇನು?
14. ಒಂದು ರೇಖಾತ್ಮಕ ಕ್ರಮವಿಧಿ ಸಮಸ್ಯೆಯಲ್ಲಿ ಪರಿಹಾರವನ್ನು ವ್ಯಾಖ್ಯಾನಿಸಿ.
15. ಆಟದಲ್ಲಿ 'ತಂತ್ರ'ವನ್ನು ವ್ಯಾಖ್ಯಾನಿಸಿ.

## ವಿಭಾಗ – B

II. ಈ ಕೆಳಗಿನ ಯಾವುದಾದರೂ***ಹತ್ತು***ಪ್ರಶ್ನೆಗಳಿಗೆ ಉತ್ತರಿಸಿ: **10 × 2 = 20**

16. ಜನಜೀವನ ಅಂಕಿಅಂಶಗಳ ಎರಡು ಉಪಯೋಗಗಳನ್ನು ತಿಳಿಸಿ.
17. ಒಂದು ಜೀವ ಕೋಷ್ಟಕದಲ್ಲಿ $l_1$= 95,400 ಮತ್ತು $l_2$= 93,492 ಆದರೆ, $d_1$ ಕಂಡುಹಿಡಿಯಿರಿ.
18. ಸೂಚ್ಯಾಂಕದ ಲಕ್ಷಣಗಳನ್ನು ಉಪಯೋಗಗಳನ್ನು ತಿಳಿಸಿ.
19. $\Sigma p_1q$ = 450 ಮತ್ತು $\Sigma p_0q$ = 400 ಆದಾಗ, ಕೆಲ್ಲಿಯ ಬೆಲೆ ಸೂಚ್ಯಾಂಕ ಕಂಡುಹಿಡಿಯಿರಿ.
20. ಈ ದತ್ತಾಂಶಕ್ಕೆ ಗ್ರಾಹಕ ಬೆಲೆ ಸೂಚ್ಯಾಂಕವನ್ನು ಕಂಡುಹಿಡಿಯಿರಿ.

| ಗುಂಪು | A | B | C | D |
|---|---|---|---|---|
| ಗುಂಪು ಸೂಚಕ | 100 | 120 | 130 | 110 |

https://byjus.com

| ಭಾರ | 2 | 3 | 1 | 4 |
|---|---|---|---|---|

21. ಕಾಲ ಸರಣಿಯ ಎರಡು ಉಪಯೋಗಗಳನ್ನು ತಿಳಿಸಿ.
22. ವ್ಯಾಪಾರ ಚಕ್ರದ ಹಂತಗಳನ್ನು ಚಿತ್ರ ಸಹಿತ ನಿರೂಪಿಸಿ.
23. ಅಂತರ್ವೇಶನ ಮತ್ತು ಬಹಿರ್ವೇಶನದಲ್ಲಿ ದ್ವಿಪದ ವಿಸ್ತರಣಾ ವಿಧಾನದ ಕರಾರುಗಳನ್ನು ಬರೆಯಿರಿ.
24. ಒಂದು ಪೊಸಾನ್ ವಿತರಣೆಯ ಸರಾಸರಿ 5 ಆದರೆ, $P(X = 0)$ ಬೆಲೆಯನ್ನು ಕಂಡುಹಿಡಿಯಿರಿ.
25. ಒಂದು t – ವಿತರಣೆಯಲ್ಲಿ $n = 4$ ಆದಾಗ, ಇದರ ನಿಯತ ವಿಚಲನೆ ಕಂಡುಹಿಡಿಯಿರಿ.
26. $P = 0.1$ ಮತ್ತು $n = 100$ ಆದಾಗ, S.E(p)ಅನ್ನು ಕಂಡುಹಿಡಿಯಿರಿ.
27. ಮೊದಲನೆಯ ತರಹದ ಮತ್ತು ಎರಡನೆಯ ತರಹದ ದೋಷಗಳನ್ನು ವ್ಯಾಖ್ಯಾನಿಸಿ.
28. $\bar{\bar{X}} = 40$, $\bar{R} = 2.5$ ಮತ್ತು $A_2 = 0.577$ ಆದಾಗ, $\bar{X}$– ನಕ್ಷೆಯ ಕೆಳನಿಯಂತ್ರಣ ಮಿತಿಯನ್ನು ಕಂಡುಹಿಡಿಯಿರಿ.
29. ಒಂದು ಸಾಗಾಣಿಕಾ ಸಮಸ್ಯೆಯಲ್ಲಿ ಅವನತಿ ಹೊಂದುತ್ತಿರುವ ಮತ್ತು ಅವನತಿ ಹೊಂದದ ಪರಿಹಾರಗಳೆಂದರೇನು?
30. ವಸ್ತುಗಳನ್ನು ಬದಲಾಯಿಸುವ ಎರಡು ಅವಶ್ಯಕತೆಗಳನ್ನು ತಿಳಿಸಿ.

**ವಿಭಾಗ –C**

III. ಈ ಕೆಳಗಿನ ಯಾವುದಾದರೂ ***ಎಂಟು*** ಪ್ರಶ್ನೆಗಳಿಗೆ ಉತ್ತರಿಸಿ: **8 × 5 = 40**

31. ಈ ದತ್ತಾಂಶಕ್ಕೆ CBR ಮತ್ತು GFR ಲೆಕ್ಕಿಸಿ.

| ವಯೋ ವರ್ಗ[ವರ್ಷಗಳಲ್ಲಿ] | ಪುರುಷ ಜನಸಂಖ್ಯೆ | ಮಹಿಳಾ ಜನಸಂಖ್ಯೆ | ಸಜೀವ ಜನನಗಳು |
|---|---|---|---|
| 0 - 14 | 46000 | 43000 | - |
| 15 - 24 | 34000 | 32000 | 6846 |
| 25 - 39 | 39000 | 38000 | 3893 |
| 40 - 49 | 30000 | 28000 | 674 |
| 50 - 79 | 27000 | 26000 | - |
| 80 & above | 15000 | 12000 | - |

32. ಈ ದತ್ತಾಂಶಕ್ಕೆ ಒಟ್ಟು ಪುನರುತ್ಪತ್ತಿ ದರ[GRR]ಲೆಕ್ಕಿಸಿ.

| ವಯೋವರ್ಗ [ವರ್ಷಗಳಲ್ಲಿ] | 15 - 19 | 20 - 24 | 25 - 29 | 30 - 34 | 35 - 39 | 40 - 44 | 45 - 49 |
|---|---|---|---|---|---|---|---|
| ಮಹಿಳಾ ಜನಸಂಖ್ಯೆ | 14,000 | 15,000 | 14,000 | 13,000 | 12,000 | 11,000 | 10,000 |
| ಹೆಣ್ಣು ಜನನಗಳು | 630 | 870 | 980 | 650 | 600 | 220 | 30 |

33. ಸೂಚ್ಯಾಂಕದ ರಚನೆಯಲ್ಲಿನ ಹಂತಗಳಾವುವು? ಅವುಗಳಲ್ಲಿ ಯಾವುದಾದರೂ ಎರಡನ್ನು ವಿವರಿಸಿ.

34. ಈ ದತ್ತಾಂಶವು 2010 ಮತ್ತು 2015 ರಲ್ಲಿನ ವಸ್ತುಗಳ ಬೆಲೆಗಳಿಗೆ ಸಂಬಂಧಿಸಿದೆ. ಸರಳ ಗುಣೋತ್ತರ ಸರಾಸರಿ ಬೆಲೆ ಸೂಚ್ಯಾಂಕ ಕಂಡುಹಿಡಿಯಿರಿ.

| ವಸುÛ | A | B | C | D | E | F |
|---|---|---|---|---|---|---|

https://byjus.com

| ಬೆಲೆ (ರೂ.) | 2010 | 50 | 60 | 20 | 50 | 80 | 125 |
|---|---|---|---|---|---|---|---|
| | 2015 | 55 | 75 | 30 | 75 | 70 | 130 |

35. ಈ ದತ್ತಾಂಶಕ್ಕೆ ತ್ರೈವಾರ್ಷಿಕ ಚಲನ ಸರಾಸರಿಗಳ ಮೂಲಕ ಪ್ರವೃತ್ತಿ ಬೆಲೆಗಳನ್ನು ಪಡೆಯಿರಿ.

| ವರ್ಷ | 1995 | 1996 | 1997 | 1998 | 1999 | 2000 | 2001 | 2002 | 2003 | 2004 |
|---|---|---|---|---|---|---|---|---|---|---|
| ಮಾರಾಟ ('000) | 86 | 63 | 45 | 58 | 43 | 57 | 98 | 120 | 100 | 150 |

36. ಈ ದತ್ತಾಂಶಕ್ಕೆ ಕನಿಷ್ಠತಮ ವರ್ಗಗಳ ವಿಧಾನದಿಂದ ಸರಳರೇಖಾ ಪ್ರವೃತ್ತಿ ನಿಯೋಜಿಸಿ.

| ವರ್ಷ | 2002 | 2004 | 2006 | 2008 | 2010 | 2012 |
|---|---|---|---|---|---|---|
| ಲಾಭ (ಕೋಟಿ ರೂ.) | 10 | 20 | 32 | 36 | 52 | 60 |

37. ಈ ದತ್ತಾಂಶಕ್ಕೆ 2000 ಮತ್ತು 2010ರ ಉತ್ಪಾದನೆಯನ್ನು ಅಂತರ್ವೇಶನ ಮತ್ತು ಬಹಿರ್ವೇಶನ ಮಾಡಿ.

| ವರ್ಷ | 1980 | 1985 | 1990 | 1995 | 2000 | 2005 | 2010 |
|---|---|---|---|---|---|---|---|
| ಉತ್ಪಾದನೆ (ಟನ್‌ಗಳಲ್ಲಿ) | 5 | 12 | 19 | 26 | - | 40 | - |

38. ಒಂದು ನಗರದ 40%ಜನ ಸಸ್ಯಹಾರಿಗಳಾಗಿದ್ದಾರೆ. 6 ವ್ಯಕ್ತಿಗಳ ಒಂದು ಆಕಸ್ಮಿಕ ನಿದರ್ಶಕದಲ್ಲಿ i) ಮೂವರು ಸಸ್ಯಹಾರಿಗಳು ii) ಕನಿಷ್ಠ ಒಬ್ಬ ಸಸ್ಯಹಾರಿ ಆಗಿರುವ ಸಂಭವತೆಗಳನ್ನು ಕಂಡುಹಿಡಿಯಿರಿ.

39. ಒಂದು ಕೊಳದಲ್ಲಿ 10 ಮೀನುಗಳಿವೆ ಅವುಗಳಲ್ಲಿ 4ನ್ನು ಗುರುತಿಸಲಾಗಿದೆ (ಗುರುತಿಸಿದ ಮೀನುಗಳು ನಿರ್ದಿಷ್ಟ ವೀಕ್ಷಣೆಯಲ್ಲಿವೆ). 4 ಮೀನುಗಳನ್ನು ಕೊಳದಿಂದ ಹಿಡಿಯಲಾಗಿದೆ. ಅವುಗಳಲ್ಲಿ ಎರಡು ಗುರುತಿಸಿದವುಗಳಾಗಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ. ಗುರುತಿಸಿದವುಗಳ ಸರಾಸರಿಯನ್ನೂ ಸಹ ಕಂಡುಹಿಡಿಯಿರಿ.

40. ಯೋಗ ಅಭ್ಯಾಸ ಮಾಡುವವರ ಸರಾಸರಿ ರಕ್ತದ ಸಕ್ಕರೆ ಪ್ರಮಾಣ 120mg/dlಗಿಂತ ಕಡಿಮೆ ಇದೆ ಎಂಬುದನ್ನು ಪರೀಕ್ಷಿಸುವ ಅವಶ್ಯಕತೆಯಿದೆ. ಯೋಗ ಅಭ್ಯಾಸ ಮಾಡುವ 36 ವ್ಯಕ್ತಿಗಳನ್ನು ವೀಕ್ಷಿಸಲಾಗಿದೆ. ಅವರ ಸರಾಸರಿ ರಕ್ತದ ಸಕ್ಕರೆ ಪ್ರಮಾಣ 118.5mg/dl ಮತ್ತು ವಿಚಲನೆ $9mg^2/dl$ ಎಂದು ಕಂಡುಬಂದಿದೆ. ಶೇಖಡಾ 1ರ ಲಕ್ಷ್ಯಾರ್ಹತೆಯಲ್ಲಿ ನಿಮ್ಮ ತೀರ್ಮಾನವೇನು?

41. ಈ ದತ್ತಾಂಶದಿಂದ ಸರಾಸರಿಗಳಲ್ಲಿ ಗಮನಾರ್ಹ ವ್ಯತ್ಯಾಸವಿದೆಯೇಎಂಬುದನ್ನು ಪರೀಕ್ಷಿಸಿ. $\alpha$ = 0.05ಉಪಯೋಗಿಸಿ.

| ನಿದರ್ಶಕ | I | II |
|---|---|---|
| ಗಾತ್ರ | 12 | 7 |
| ಸರಾಸರಿ | 57.2 | 52.3 |
| ನಿ.ವಿ. | 3.41 | 3.62 |

42. ಈ ಕೆಳಗಿನ ದತ್ತಾಂಶದಿಂದ ಶಿಕ್ಷಣ ಮತ್ತು ಉದ್ಯೋಗ ಎಂಬ ಗುಣಧರ್ಮಗಳು ಸ್ವತಂತ್ರವಾಗಿವೆಯೇ ಎಂಬುದನ್ನು ಶೇಕಡಾ 1ರ ಲಕ್ಷ್ಯಾರ್ಹತೆಯಲ್ಲಿ ಪರೀಕ್ಷಿಸಿ.

| ಶಿಕ್ಷಣ | ಉದ್ಯೋಗ |
|---|---|

| | ಉದ್ಯೋಗಿಗಳು | ನಿರುದ್ಯೋಗಿಗಳು |
|---|---|---|
| ವಿದ್ಯಾವಂತರು | 20 | 25 |
| ಅವಿದ್ಯಾವಂತರು | 15 | 40 |

43. ನೆಲಕ್ಕೆ ಹಾಸುವ ಮ್ಯಾಟ್ ತಯಾರಿಸುವ ಒಂದು ಕಂಪನಿಯಲ್ಲಿ, ಪ್ರತಿ ಚದುರ ಮೀಟರ ಮ್ಯಾಟ್‌ನಲ್ಲಿಯ ಸರಾಸರಿ ನ್ಯೂನತೆಗಳ ಸಂಖ್ಯೆ 4. ನ್ಯೂನತೆಗಳ ಸಂಖ್ಯೆಯ ಮೇಲಿನ ಮತ್ತು ಕೆಳಗಿನ ನಿಯಂತ್ರಣ ಮಿತಿಗಳನ್ನು ನಿಶ್ಚಯಿಸಿ.

44. ಈ ರೇಖಾತ್ಮಕ ಕ್ರಮವಿಧಿ ಸಮಸ್ಯೆಯನ್ನು ಆಲೇಖ ವಿಧಾನದಿಂದ ಬಿಡಿಸಿ.

ಗರಿಷ್ಟಗೊಳಿಸಿ: $Z = 10x + 15y$

ನಿಬಂಧನೆಗಳಿಗೆ ಒಳಪಟ್ಟು : $x + y \leq 10$

$3x + 2y \geq 15$

ಮತ್ತು $x, y \geq 0$

ಅಥವಾ

**(ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ)**

ರೇಖಾತ್ಮಕ ಕ್ರಮವಿಧಿ ಸಮಸ್ಯೆಯನ್ನು ಬಿಡಿಸುವ ಆಲೇಖ ವಿಧಾನವನ್ನು ವಿವರಿಸಿ.

45. ಈ ಕೆಳಗಿನ ಆಟವನ್ನು ಪ್ರಭುತ್ವ ವಿಧಾನದ ಮೂಲಕ ಬಿಡಿಸಿ.

ಆಟಗಾರ B

$$\begin{array}{cc} & \begin{array}{cccc} B_1 & B_2 & B_3 & B_4 \end{array} \\ \text{ಆಟಗಾರ A} \begin{array}{c} A_1 \\ A_2 \\ A_3 \end{array} & \begin{pmatrix} 1 & 2 & 0 & 3 \\ 4 & 6 & 3 & 5 \\ 3 & -1 & -2 & 0 \end{pmatrix} \end{array}$$

## ವಿಭಾಗ– D

IV. ಈ ಕೆಳಗಿನ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಉತ್ತರಿಸಿ: **2 × 10 = 20**

46. ಈ ಕೆಳಗಿನ ದತ್ತಾಂಶಕ್ಕೆ A ಮತ್ತು B ಪಟ್ಟಣಗಳ ನಿಯತೀಕೃತ ಮರಣ ದರಗಳನ್ನು ಕಂಡುಹಿಡಿಯಿರಿ. ಫಲಿತಾಂಶಗಳ ಬಗ್ಗೆ ವಿಮರ್ಶಿಸಿ.

| ವಯೋವರ್ಗ [ವರ್ಷಗಳಲ್ಲಿ] | ಪಟ್ಟಣ – A | | ಪಟ್ಟಣ – B | | ಆದರ್ಶ ಜನಸಂಖ್ಯೆ |
|---|---|---|---|---|---|
| | ಜನಸಂಖ್ಯೆ | ಮರಣಗಳು | ಜನಸಂಖ್ಯೆ | ಮರಣಗಳು | |
| 0 – 20 | 4,000 | 36 | 3,000 | 30 | 2,000 |
| 20 – 40 | 12,000 | 48 | 20,000 | 100 | 3,000 |
| 40 – 60 | 6,000 | 60 | 4,000 | 48 | 6,000 |
| 60 ಮತ್ತು ಹೆಚ್ಚು | 8,000 | 152 | 3,000 | 60 | 4,000 |

47. ಈ ದತ್ತಾಂಶಕ್ಕೆ ಲ್ಯಾಸ್ಪೆಯರನ, ಪಾಶ್ಚೆಯನ ಮತ್ತು ಡಾರ್ಬಿಶ್–ಬೌಲಿಯ ಬೆಲೆ ಸೂಚ್ಯಾಂಕಗಳನ್ನು ಕಂಡುಹಿಡಿಯಿರಿ.

| ವಸ್ತು | 2004 | | 2008 | |
|---|---|---|---|---|
| | ಬೆಲೆ (ರೂ.) | ಪರಿಮಾಣ | ಬೆಲೆ (ರೂ.) | ಪರಿಮಾಣ |
| A | 10 | 5 | 15 | 4 |

| | | | | |
|---|---|---|---|---|
| B | 15 | 8 | 20 | 7 |
| C | 6 | 3 | 10 | 5 |
| D | 3 | 4 | 4 | 5 |

48. ಈ ದತ್ತಾಂಶಕ್ಕೆ ಫಿಶರನ ಸೂಚ್ಯಾಂಕವು ಸಮಯ ಮತ್ತು ಅಂಶ ವ್ಯತಿರಿಕ್ತ ಪರೀಕ್ಷೆಗಳನ್ನು ತೃಪ್ತಿಪಡಿಸುವುದೇ ಎಂದು ಪರೀಕ್ಷಿಸಿ.

| ವಸ್ತು | ಬೆಲೆ (ರೂ.) | | ಪರಿಮಾಣ | |
|---|---|---|---|---|
| | ಆಧಾರ ವರ್ಷ | ಪ್ರಚಲಿತ ವರ್ಷ | ಆಧಾರ ವರ್ಷ | ಪ್ರಚಲಿತ ವರ್ಷ |
| A | 4 | 6 | 4 | 6 |
| B | 6 | 10 | 4 | 8 |
| C | 8 | 11 | 5 | 3 |

49. ಈ ಕೆಳಗಿನ ಕಾಲ ಸರಣಿ ದತ್ತಾಂಶಕ್ಕೆ ಕನಿಷ್ಠತಮ ವರ್ಗಗಳ ವಿಧಾನದಿಂದ$Y=a+bx+cx^2$ರೀತಿಯ ದ್ವಿಘಾತೀಯ ಪ್ರವೃತ್ತಿಯನ್ನು ನಿಯೋಜಿಸಿ, 2010 ಕ್ಕೆ ಲಾಭವನ್ನು ಅಂದಾಜಿಸಿ.

| ವರ್ಷ | 2005 | 2006 | 2007 | 2008 | 2009 |
|---|---|---|---|---|---|
| ಲಾಭ (ಲಕ್ಷ ರೂ.ಗಳಲ್ಲಿ) | 10 | 8 | 12 | 18 | 26 |

50. ಒಂದು ಪುಸ್ತಕದಲ್ಲಿನ ಪ್ರತಿ ಪುಟಗಳಲ್ಲಿ ಕಂಡುಬಂದ ತಪ್ಪುಗಳ ಸಂಖ್ಯೆಗೆ ಈ ದತ್ತಾಂಶ ಸಂಬಂಧಿಸಿದೆ. ಪೊಸಾನ್ ವಿತರಣೆಯನ್ನು ನಿಯೋಜಿಸಿ. ಈ ನಿಯೋಜನೆ ಉತ್ತಮವೇ ಎಂಬುದನ್ನು ಶೇಖಡಾ 5ರ ಲಕ್ಷಾರ್ಹತೆಯಲ್ಲಿ ಪರೀಕ್ಷಿಸಿ.

| ಪ್ರತಿ ಪುಟಗಳ ತಪ್ಪುಗಳ ಸಂಖ್ಯೆ | 0 | 1 | 2 | 3 | 4 | 5ಮತ್ತು ಹೆಚ್ಚು |
|---|---|---|---|---|---|---|
| ಪುಟಗಳ ಸಂಖ್ಯೆ | 31 | 34 | 21 | 12 | 2 | 0 |

## ವಿಭಾಗ- E

V. ಈ ಕೆಳಗಿನ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಉತ್ತರಿಸಿ: **2 × 5 = 10**

51. ಒಂದು ತರಗತಿಯ ವಿದ್ಯಾರ್ಥಿಗಳು ಗಳಿಸದ ಅಂಕಗಳು ಪ್ರಸಾಮಾನ್ಯ ವಿತರಣೆಯನ್ನು ಸರಾಸರಿ 80 ಮತ್ತು ನಿ.ವಿ. 5 ರೊಂದಿಗೆ ಹೊಂದಿದೆ. ಆ ತರಗತಿಯಿಂದ ಆಕಸ್ಮಿಕವಾಗಿ ಆಯ್ದ ಒಬ್ಬ ವಿದ್ಯಾರ್ಥಿ i) 70 ಕ್ಕಿಂತ ಹೆಚ್ಚು ii) 75 ಮತ್ತು 90 ರ ನಡುವಿನ ಅಂಕಗಳನ್ನು ಗಳಿಸಿರುವ ಸಂಭವತೆಗಳನ್ನು ಕಂಡುಹಿಡಿಯಿರಿ.

52. 2011ರಲ್ಲಿ ಒಂದು ನಗರದಿಂದ ಆಯ್ದ 120 ವ್ಯಕ್ತಿಗಳ ಒಂದು ನಿದರ್ಶಕದಲ್ಲಿ 96ವ್ಯಕ್ತಿಗಳು ಕ್ರಿಕೆಟ್ ಸ್ಪರ್ಧೆಯನ್ನು ನೋಡುತ್ತಾರೆ ಎಂದು ಪ್ರಕಟಣೆ ತಿಳಿಸುತ್ತದೆ.2013ರಲ್ಲಿ ಈ ನಗರದಿಂದ ಆಯ್ದ 100 ವ್ಯಕ್ತಿಗಳ ಮತ್ತೊಂದು ನಿದರ್ಶಕದಲ್ಲಿ 90ವ್ಯಕ್ತಿಗಳು ಕ್ರಿಕೆಟ್ ಸ್ಪರ್ಧೆಯನ್ನು ನೋಡುತ್ತಾರೆ ಎಂದು ಪ್ರಕಟಣೆ ತಿಳಿಸುತ್ತದೆ. ಕ್ರಿಕೆಟ್ ಸ್ಪರ್ಧೆಯನ್ನು ನೋಡುವವರ ಅನುಪಾತಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆಯೇ ಎಂಬುದನ್ನು ಪರೀಕ್ಷಿಸಿ? ಶೇಖಡಾ 1ರ ಲಕ್ಷಾರ್ಹ ಮಟ್ಟ ಉಪಯೋಗಿಸಿ.

53. ಐದು ವ್ಯಕ್ತಿಗಳ ಧ್ಯಾನ ಮಾಡುವ ಮೊದಲು ಮತ್ತು ನಂತರದ ರಕ್ತದೊತ್ತಡಗಳಿಗೆ ಸಂಬಂಧಿಸಿದ ದತ್ತಾಂಶ ಇಂತಿದೆ.

| ವ್ಯಕ್ತಿ | A | B | C | D | E |
|---|---|---|---|---|---|
| ಧ್ಯಾನದ ಮೊದಲ B.P. | 90 | 90 | 100 | 88 | 99 |
| ಧ್ಯಾನದ ನಂತರದ B.P. | 88 | 90 | 95 | 90 | 96 |

ಶೇ. 5 ರ ಲಕ್ಷಾರ್ಹತೆಯಲ್ಲಿ ಧ್ಯಾನವು ರಕ್ತದೊತ್ತಡವನ್ನು ಕಡಿಮೆ ಮಾಡಿದೆಯೇ?

54. ಒಂದು ಯಂತ್ರದ ಬೆಲೆ ರೂ.8,000 ಮತ್ತು ಇದರ ನಿರ್ವಹಣಾ ವೆಚ್ಚ ಮತ್ತು ಮರುಮಾರಾಟ ಬೆಲೆಗಳು ಇಂತಿವೆ.

| ವರ್ಷ | 1 | 2 | 3 | 4 | 5 |
|---|---|---|---|---|---|
| ನಿರ್ವಹಣಾ ವೆಚ್ಚ (ರೂ.) | 500 | 600 | 800 | 1,100 | 1,500 |
| ಮರುಮಾರಾಟ ಬೆಲೆ (ರೂ.) | 4,500 | 3,500 | 2,500 | 1,500 | 500 |

ಯಂತ್ರದ ಬದಲಾವಣೆಯ ಸಮುಚಿತ ಅವಧಿ ಯಾವುದು?ಸರಾಸರಿ ವಾರ್ಷಿಕ ವೆಚ್ಚ ಎಷ್ಟು?

55. ಒಂದು ವಸ್ತುವಿನ ವಾರ್ಷಿಕ ಬೇಡಿಕೆ 10000ಮಾನಗಳು, ಮರುದಾಸ್ತಾನು ವೆಚ್ಚ ರೂ.200, ಪ್ರತಿ ವಸ್ತುವಿನ ವಾರ್ಷಿಕ ನಿರ್ವಹಣಾ ವೆಚ್ಚವು ರೂ.9. ತಕ್ಷಣದ ಮರುದಾಸ್ತಾನು ಇದ್ದು, ಕೊರತೆಗೆ ಅವಕಾಶವಿಲ್ಲದಾಗ ಮಿತವ್ಯಯ ಬೇಡಿಕೆ ಪ್ರಮಾಣ ಮತ್ತು ಕನಿಷ್ಟ ಸರಾಸರಿ ದಾಸ್ತಾನು ವೆಚ್ಚಗಳನ್ನು ಕಂಡುಹಿಡಿಯಿರಿ.

*****